# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೆರಡನೇ ಅಧಿವೇಶನ

**ಲಘು ಪ್ರಕಟಣೆ ಭಾಗ – 2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶನಿವಾರ, ದಿನಾಂಕ: 25ನೇ ಮೇ, 2013.**

**ಕ್ರಮ ಸಂಖ್ಯೆ : 25**

**ವಿಧಾನ ಪರಿಷತ್ತಿನ ಉಪವೇಶನಗಳು**

ಕರ್ನಾಟಕ ವಿಧಾನ ಪರಿಷತ್ತಿನ ನೂರ ಇಪ್ಪತ್ತೆರಡನೇ ಅಧಿವೇಶನದ ಉಪವೇಶನಗಳು ದಿನಾಂಕ: 03.06.2013 ರಿಂದ ಪ್ರಾರಂಭವಾಗಲಿದ್ದು, ದಿನಾಂಕ: 07.06.2013 ರವರೆಗೆ ಕಾರ್ಯಕಲಾಪಗಳನ್ನು ನಡೆಸಲು ನಿಗದಿಗೊಳಿಸಲಾಗಿದೆ.

ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಉಪವೇಶನದ ವೇಳೆಯನ್ನು ಅನ್ಯಥಾ ಅಧಿಸೂಚಿಸದ ಹೊರತು ಸದನದ ಉಪವೇಶನವು ಬೆಳಗ್ಗೆ 11-00 ಗಂಟೆಯಿಂದ 2-00 ಗಂಟೆಯವರೆಗೆ ಮತ್ತು ಮಧ್ಯಾಹ್ನ 3-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಸಮಾವೇಶಗೊಳ್ಳುತ್ತದೆ.

ಸದನದ ಉಪವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಅಥವಾ ಒಂದು ದಿನದ ಮಟ್ಟಿಗೆ ಅಥವಾ ಸದನದ ಉಪವೇಶನದ ಕಾಲದಲ್ಲಿನ ಒಂದು ಗಂಟೆಯವರೆಗೆ ಅಥವಾ ಅದೇ ದಿನದ ಒಂದು ಭಾಗದವರೆಗೆ ಮುಂದೂಡುವುದನ್ನು ಮಾನ್ಯ ಸಭಾಪತಿಯವರು ನಿರ್ಧರಿಸುವರು.

ಮಾನ್ಯ ಸಭಾಪತಿಯವರು ತಮಗೆ ಸೂಕ್ತವೆಂದು ಕಂಡುಬಂದ ಪಕ್ಷದಲ್ಲಿ ಸದನದ ಉಪವೇಶನವು ಯಾವ ದಿನಾಂಕ ಅಥವಾ ಕಾಲಕ್ಕಿಂತ ಮುಂಚಿತವಾಗಿ ಅಥವಾ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಿದ ತರುವಾಯ ಯಾವ ಕಾಲದಲ್ಲಾಗಲಿ ಸದನದ ಉಪವೇಶನವನ್ನು ನಡೆಸಬಹುದು.

ವಿಧಾನ ಪರಿಷತ್ತಿನ ನೂರ ಇಪ್ಪತ್ತೆರಡನೇ ಅಧಿವೇಶನದ ಉಪವೇಶನಗಳ ಕಾರ್ಯಕಲಾಪಗಳನ್ನು ವ್ಯವಹರಿಸಲು ಈ ಕೆಳಕಂಡಂತೆ ದಿನಾಂಕಗಳನ್ನು ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ.

**ದಿನಾಂಕ: 03, 04, 05, 06 ಮತ್ತು 07ನೇ ಜೂನ್, 2013.**

ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಮೇರೆಗೆ ನೀಡಬೇಕಾದ ಎಲ್ಲಾ ಸೂಚನಾ ಪತ್ರಗಳನ್ನು ಸಭಾಪತಿಯವರಿಗೆ ಹೆಸರಿಸದೆ, ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಗೆ ಹೆಸರಿಸಿ ಸದಸ್ಯರು ಸಹಿ ಮಾಡಿದ ಉಚಿತ ಸೂಚನಾ ಪತ್ರವನ್ನು ನೀಡಬೇಕು.

## ಪ್ರಶ್ನೆಗಳು (ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು)

### ನಿಯಮ 35 ರಿಂದ 41

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 35 ಮತ್ತು 37ರ ರೀತ್ಯಾ ಪ್ರಶ್ನೆಗಳನ್ನು ನೀಡಲು ನಿಗದಿತಗೊಳಿಸಿರುವ ಕಾಲಾವಕಾಶವು ಇಲ್ಲದ ಕಾರಣ ಈ ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿಯು ಇರುವುದಿಲ್ಲ.

## ಅಲ್ಪಕಾಲಾವಧಿಯ ಪ್ರಶ್ನೆಗಳು (ನಿಯಮ-56)

ಸಾರ್ವಜನಿಕ ಮಹತ್ವದ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅವು ಜರೂರು ಸ್ವರೂಪ ಉಳ್ಳದ್ದಾಗಿದ್ದಲ್ಲಿ 10 ದಿನಗಳಿಗಿಂತ ಕಡಿಮೆ ಅವಧಿಯ ಸೂಚನಾ ಪತ್ರ ನೀಡುವುದರ ಮೂಲಕ ಕೇಳಬಹುದು. ಅಲ್ಪಕಾಲಾವಧಿ ಪ್ರಶ್ನೆಗಳ ಸೂಚನೆಯನ್ನು ನೀಡುವಲ್ಲಿ ಕಾರಣಗಳೇನೆಂಬುದನ್ನು ನಮೂದಿಸಬೇಕು. ಪ್ರಶ್ನೆಗಳ ಸೂಚನೆಯಲ್ಲಿ ಕಾರಣಗಳನ್ನು ಸೂಚಿಸದಿದ್ದಲ್ಲಿ ಪ್ರಶ್ನೆಗಳನ್ನು ಸದಸ್ಯರಿಗೆ ಹಿಂದಿರುಗಿಸಲಾಗುತ್ತದೆ.

## ಗಮನ ಸೆಳೆಯುವ ಸೂಚನೆ (ನಿಯಮ 72)

ಸದಸ್ಯರು ಸಭಾಪತಿಯವರ ಪೂರ್ವಭಾವಿ ಅನುಮತಿಯೊಂದಿಗೆ ಸಾರ್ವಜನಿಕ ಮಹತ್ವದ ಯಾವುದೇ ಜರೂರು ವಿಷಯದ ಬಗ್ಗೆ ಮಂತ್ರಿಗಳ ಗಮನಸೆಳೆಯಬಹುದು ಹಾಗೂ ಮಂತ್ರಿಗಳು ಸದನದಲ್ಲಿ ಆ ಬಗ್ಗೆ ಸಂಕ್ಷಿಪ್ತವಾದ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಆ ಕಾಲಕ್ಕೆ ಚರ್ಚೆ ಇರುವುದಿಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಐದು ಸದಸ್ಯರಿಗಿಂತ ಹೆಚ್ಚಿಲ್ಲದಂತೆ ವಿಷಯಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ಸದಸ್ಯರು ಕಾರ್ಯಕಲಾಪಗಳ ಪಟ್ಟಿಯ ಮೇರೆಗೆ ಸಭಾಪತಿಯವರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಯಾವುದೇ ಸದಸ್ಯರು ಒಂದು ಉಪವೇಶನದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಬಾರಿ ಸೂಚನೆಗಳನ್ನು ನೀಡತಕ್ಕದ್ದಲ್ಲ.

ಸೂಚನಾ ಪತ್ರಗಳನ್ನು ನಿಗದಿಪಡಿಸಲಾದ ನಮೂನೆಯಲ್ಲಿ ವಿದ್ಯುಕ್ತವಾಗಿ ಸಹಿ ಮಾಡಿ ವಿಧಾನ ಪರಿಷತ್ತಿನ ಪ್ರಶ್ನೆಗಳ ಶಾಖೆಗೆ ( ಕೊಠಡಿ ಸಂಖ್ಯೆ: 103 ) ಬೆಳಗ್ಗೆ 10-00 ಗಂಟೆಯೊಳಗೆ ನೀಡಬೇಕು. ಕಚೇರಿಯು ಮುಚ್ಚಿರುವ ಸಮಯದಲ್ಲಿ ಸೂಚನಾ ಪತ್ರವನ್ನು ಸದಸ್ಯರು ಪ್ರಶ್ನೆಗಳ ಶಾಖೆಯ ( ಕೊಠಡಿ ಸಂಖ್ಯೆ: 103 ) ಹೊರಗಡೆ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬಹುದಾಗಿದೆ. ಆ ದಿನದ ಬೆಳಗ್ಗೆ 10-00 ಗಂಟೆಯ ನಂತರ ಪಡೆಯಲಾಗುವ ಸೂಚನಾ ಪತ್ರಗಳನ್ನು ಸದನದ ಮರು ದಿನದ ಉಪವೇಶನಕ್ಕೆ ನೀಡಲಾಗಿದೆಯೆಂದು ಪರಿಗಣಿಸಲಾಗುವುದು. ಸ್ವೀಕೃತವಾದ ಹಾಗೂ ಮಂಡಿಸಿದ ಎಲ್ಲಾ ಸೂಚನಾ ಪತ್ರಗಳು ಒಂದು ವಾರದವರೆಗೆ ಮಾನ್ಯವಾಗಿರುತ್ತವೆ.

ಸಭಾಪತಿಯವರು ಆಯ್ಕೆ ಮಾಡದೆ ಉಳಿದಂತಹ ಸೂಚನೆಗಳು, ಅವುಗಳನ್ನು ಮಂಡಿಸಲಾದ ವಾರದ ಕೊನೆಯಲ್ಲಿ ಅವಾಗಿಯೇ ರದ್ದಾಗುತ್ತವೆ. ಈ ಬಗ್ಗೆ ಸದಸ್ಯರುಗಳಿಗೆ ಯಾವುದೇ ಮಾಹಿತಿ ನೀಡಲಾಗುವುದಿಲ್ಲ. ಆದಾಗ್ಯೂ, ಸದಸ್ಯರು ಇಚ್ಛಿಸಿದಲ್ಲಿ ಅದೇ ವಿಷಯದ ಬಗ್ಗೆ ಹೊಸದಾಗಿ ಸೂಚನಾ ಪತ್ರವನ್ನು ನೀಡಬಹುದು.

## ನಿಯಮ 330ರ ಮೇರೆಗೆ ಸೂಚನೆ

ಒಂದು ಕ್ರಿಯಾಲೋಪವಲ್ಲದಂತಹ ಯಾವ ವಿಷಯವನ್ನಾಗಲಿ ಪರಿಷತ್ತಿನ ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ನಿಗದಿಪಡಿಸಿದ ನಮೂನೆಯಲ್ಲಿ ವಿಷಯವನ್ನು ಕಾರಣಗಳ ಸಹಿತ ಸಂಕ್ಷಿಪ್ತವಾಗಿ ವಿವರಿಸಿ, ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ ಸೂಚನಾ ಪತ್ರವನ್ನು ಕೊಡಬೇಕು. ಸಭಾಪತಿಯವರು ಅನುಮತಿ ನೀಡಿದ ನಂತರವೇ ಸದಸ್ಯರು ವಿಷಯವನ್ನು ಪ್ರಸ್ತಾಪಿಸಲು ಅನುಮತಿ ದೊರೆತಂತಾಗುವುದು ಮತ್ತು ಆ ಸದಸ್ಯರು ಸಭಾಪತಿಯವರು ಗೊತ್ತುಪಡಿಸಬಹುದಾದ ಸಮಯ ಮತ್ತು ದಿನದಲ್ಲಿ ಮಾತ್ರ ಆ ವಿಷಯವನ್ನು ಪ್ರಸ್ತಾಪಿಸಬಹುದು.

## ನಿಯಮ 330ಎ ಮೇರೆಗೆ ಸೂಚನೆ

**330ಎ. ವಿಶೇಷ ಪ್ರಸ್ತಾವಗಳು**:- ಪ್ರಶ್ನೋತ್ತರದ ವೇಳೆ ಇಲ್ಲದ ದಿನದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಗುವ ಮುಂಚೆ ಯಾರೇ ಸದಸ್ಯರು ಇತ್ತೀಚಿನ ವಿಷಯಗಳನ್ನೊಳಗೊಂಡ ಎರಡು ನೂರು ಪದಗಳಿಗೆ ಮೀರದಂತೆ ಸಭಾಪತಿಗಳ ಅನುಮತಿಯ ಮೇರೆಗೆ ವಿಶೇಷ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಬಹುದು. ಸರ್ಕಾರವು ಆ ಪ್ರಸ್ತಾವಕ್ಕೆ ಮೂರು ದಿನಗಳ ಒಳಗೆ ಉತ್ತರವನ್ನು ಸದನಕ್ಕೆ ನೀಡತಕ್ಕದ್ದು.

ಸಭಾಪತಿಯವರು ಒಂದು ದಿನಕ್ಕೆ ಮೂರಕ್ಕಿಂತ ಹೆಚ್ಚು ಇಲ್ಲದಂತೆ ಪ್ರಸ್ತಾವಗಳನ್ನು ಚರ್ಚಿಸಲು ಅನುಮತಿಸತಕ್ಕದ್ದಲ್ಲ.

# ದಿನಾಂಕ: 07ನೇ ಜೂನ್, 2013.

## ಖಾಸಗಿ ಸದಸ್ಯರ ನಿರ್ಣಯಗಳು
(ನಿಯಮ 143)

ಸದಸ್ಯರ ಖಾಸಗಿ ನಿರ್ಣಯಗಳಿಗೆ ಗೊತ್ತುಪಡಿಸಿದ ದಿನದಂದು ಸದಸ್ಯರೊಬ್ಬರು ಒಂದು ನಿರ್ಣಯವನ್ನು ಪ್ರಸ್ತಾಪ ಮಾಡಲು ಇಚ್ಛಿಸಿದಲ್ಲಿ ಅವರು ನಿರ್ಣಯಗಳಿಗೆ ಸಂಬಂಧಿಸಿದಂತೆ ಬ್ಯಾಲೆಟ್‌ಗೆ ಗೊತ್ತುಪಡಿಸಲಾದ ದಿನಾಂಕಕ್ಕಿಂತ 7 ಪೂರ್ಣ ದಿನಗಳ ಮುಂಚಿತವಾಗಿ ತಾವು ಸೂಚಿಸಲಿಚ್ಛಿಸುವ ನಿರ್ಣಯದ ಸಾರಾಂಶದೊಂದಿಗೆ ಸದರಿ ನಿರ್ಣಯ (ಖಾಸಗಿ ಕಾರ್ಯಕಲಾಪ)ದ ಸೂಚನಾ ಪತ್ರವನ್ನು ನೀಡಬಹುದು.

**ಬ್ಯಾಲೆಟ್ ನಡೆಸುವ ದಿನಾಂಕ ಕೆಳಕಂಡಂತಿದೆ :**

| ಖಾಸಗಿ ಕಾರ್ಯಕಲಾಪಕ್ಕೆ ಗೊತ್ತುಪಡಿಸಿದ ದಿನಾಂಕ | ಖಾಸಗಿ ನಿರ್ಣಯಗಳ ಸೂಚನಾ ಪತ್ರ ಸ್ವೀಕರಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ | ನಿರ್ಣಯಗಳಿಗೆ ಆದ್ಯತೆಯನ್ನು ನಿರ್ಧರಿಸಲು ಬ್ಯಾಲೆಟ್ ನಡೆಸುವ ದಿನಾಂಕ |
|---|---|---|
| 07-06-2013 (ಶುಕ್ರವಾರ) | 28-05-2013 | 04-06-2013 |

## ಖಾಸಗಿ ಸದಸ್ಯರ ವಿಧೇಯಕಗಳು
(ನಿಯಮ 74)

ಒಂದು ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವ ಸಚಿವರಲ್ಲದ ಇತರೆ ಸದಸ್ಯರು ಸದರಿ ವಿಧೇಯಕದ ಉದ್ದೇಶ ಹಾಗೂ ಕಾರಣಗಳ ಹೇಳಿಕೆ ಹಾಗೂ ಅದಕ್ಕೆ ಸಂಬಂಧಿಸಿದ ಆರ್ಥಿಕ ಜ್ಞಾಪನಾ ಪತ್ರವೇನಾದರೂ ಇದ್ದಲ್ಲಿ, ಅದನ್ನು ಸೂಚನಾ ಪತ್ರದೊಂದಿಗೆ ಕೊಡಬೇಕು.

ಈ ನಿಯಮದ ಮೇರೆಗೆ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವ ಸೂಚನಾ ಪತ್ರವನ್ನು ಅಧಿವೇಶನ ಪ್ರಾರಂಭವಾಗುವುದಕ್ಕೆ ಏಳು ಪೂರ್ಣ ದಿನಗಳ ಮುಂಚೆ ನೀಡಬಹುದು.

**ಬ್ಯಾಲೆಟ್ ನಡೆಸುವ ದಿನಾಂಕ ಕೆಳಕಂಡಂತಿದೆ :**

| ಖಾಸಗಿ ಕಾರ್ಯಕಲಾಪಕ್ಕೆ ಗೊತ್ತುಪಡಿಸಿದ ದಿನಾಂಕ | ಖಾಸಗಿ ವಿಧೇಯಕದ ಸೂಚನಾ ಪತ್ರ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | ವಿಧೇಯಕಗಳಿಗೆ ಆದ್ಯತೆಯನ್ನು ನಿರ್ಧರಿಸಲು ಬ್ಯಾಲೆಟ್ ನಡೆಸುವ ದಿನಾಂಕ |
|---|---|---|
| 07-06-2013 (ಶುಕ್ರವಾರ) | 28-05-2013 | 04-06-2013 |

ವಿ. ಶ್ರೀಶ್
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಸ್ಥಳ: ಬೆಂಗಳೂರು,
ದಿನಾಂಕ: 25ನೇ ಮೇ, 2013.

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.